ಯಾಗಿದ್ದರೆ ದಯಮಾಡಿ ತಿಳಿಸಿ. ತಿಂಗಳಿಗೆ ಒಬ್ಬರಂತೆ ಬದಲಾವಣೆ ಮಾಡುವುದಾದರೆ ಅದನ್ನು ನಮಗೆ ತಿಳಿಸಬೇಕು. ಮಾನ್ಯ ಅಧ್ಯಕ್ಷಣೀಯರೇ, ಇದನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ ತಾವೇ ನೋಡಿ. ಇನ್ನು ಮುಂದೆ ಈ ರೀತಿಯ ವಿಚಿತ್ರ ಪ್ರಸಂಗ ಆಗಬಾರದು. ಇದು ಸರಿಯಲ್ಲ.

ಉಪಾಧ್ಯಕ್ಷಣಿಯವರು.—ಅದನ್ನು ಕಳುಹಿಸಿಕೊಡಿ. ನಾನು ನೋಡುತ್ತೇನೆ. ಈಗ ಸಭೆಯ ಮುಂದೆ ಆರ್ಜಿಗಳನ್ನು ಒಪ್ಪಿಸುವುದು.

ಆರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ. ಮಾನ್ಯ ಅಧ್ಯಕ್ಷಣೀಯರೇ, (ಅ) ಕುಂದಾಪುರ ಆಳಿವೆ ದರ ದಲ್ಲಿ ಮಿನುಗಾರಿಕೆ ಬಂದರು ಒದಗಿಸುವ ಬಗ್ಗೆ, (ಆ) ಕುಂದಾಪುರ ಆಸ್ಪತ್ರೆಗೆ ಆಂಬುಲೆನ್ಸ್ ಒದಗಿಸುವ ಬಗ್ಗೆ (ಇ) ಕುಂದಾಪುರದಲ್ಲಿ ಆಗ್ನಿಶಾಮಕ ದಳವನ್ನು ಒದಗಿಸುವ ಬಗ್ಗೆ (ಈ) ಗಂಗೊಳ್ಳಿ ಆಳಿವೆ ಬಾಗಿಲಿನಲ್ಲಿ ಹೂಳೆತ್ತಿಸಿ ಮಿನುಗಾರಿಕೆಗೆ ಅನುವು ಮಾಡಿಕೊಡುವ ಬಗ್ಗೆ. ಈ ಆರ್ಜಿಗಳನ್ನು ನಾನು ಸಭೆಗೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷಣಿಯವರು.—ಆರ್ಜಿಗಳನ್ನು ಸಭೆಗೆ ಒಪ್ಪಿಸಲಾಯಿತು.

ಗಮನ ಸೆಳೆಯುವ ಸೂಚನೆಗಳು

ಗಂಧದ ಕಳ್ಳ ವ್ಯಾಪಾರವನ್ನು ನಿಲ್ಲಿಸುವ ಬಗ್ಗೆ

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷಣೀಯರೇ ಬೆಳ್ತಂಗಡಿ ಮತ್ತು ಮೂಡಿಗೆರೆ ತಾಲ್ಲೂಕಿನಲ್ಲಿ ಗಂಧದ ಕಳ್ಳ ವ್ಯಾಪಾರವು ಹೆಗಲು ರಾತ್ರಿ ನಿರಂತರ ನಡೆಯುತ್ತಿದೆ. ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ಕರ್ನಾಟಕದಿಂದ ಕೇರಳಕ್ಕೆ ಸಾಗಿಸುತ್ತಿರುವ ಶ್ರೀಗಂಧದ ವ್ಯಾಪಾರ ನಿಲ್ಲಿಸುವಂತೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಅರಣ್ಯ ಮತ್ತು ಪಶುಸಂಗೋಪನೆ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಬೆಳ್ತಂಗಡಿಗೆ ಚಿಕ್ಕಮಗಳೂರು ಕಡೆಯಿಂದ ಚಾರ್ಮಾಡಿ ಗೇಟ್ ಮುಖಾಂತರ ಸರ್ಕಾರಿ ಬಸ್ಸುಗಳಲ್ಲಿ ಶ್ರೀಗಂಧವನ್ನು ಕಳ್ಳಸಾಗಾಣಿ ಮಾಡುವ ಪ್ರಯತ್ನ ನಡೆದಿದ್ದು ೧೯೮೯-೯೦ರಲ್ಲಿ ಇಂತಹ ೧೦ ಪ್ರಕರಣಗಳನ್ನು ಪತ್ತೆ ಮಾಡಿ ೧೧,೫೯೦ ರೂಪಾಯಿ ಪರಿಮಾಣದ ೧೧೮.೧೦೦ ಕೆ. ಜಿ ಶ್ರೀಗಂಧ ವನ್ನು ವಶಪಡಿಸಿಕೊಳ್ಳಲಾಗಿದೆ.

ಕರ್ನಾಟಕದಿಂದ ಕೇರಳಕ್ಕೆ ಗಂಧವನ್ನು ಕಳ್ಳಸಾಗಣೆ ಮಾಡುವುದನ್ನು ತಡೆಯಲು ಗಡಿ ಪ್ರದೇಶ ದಲ್ಲಿ ಅರಣ್ಯ ತನಿಖಾ ಠಾಣೆಗಳನ್ನು ನಿರ್ಮಿಸಿ, ಅವುಗಳ ಮುಖಾಂತರ ಹೋಗುವ ಪ್ರತಿಯೊಂದು ವಾಹನವನ್ನು ಪರಿಶೀಲಿಸಿ, ಗಂಧವು ಕಳ್ಳ ಸಾಗಣೆಯಾಗದಂತೆ ತಡೆಯಲಾಗುತ್ತಿದೆ.

ಬೆಳ್ತಂಗಡಿ ಮತ್ತು ಮೂಡಿಗೆರೆ ತಾಲ್ಲೂಕಿನಲ್ಲಿ ಶ್ರೀಗಂಧದ ಕಳ್ಳ ಸಾಗಾಣಿಕೆ ನಡೆಯುತ್ತಿದ್ದುದ್ದಿ ಇದನ್ನು ತಡೆಗಟ್ಟಲು ಅರಣ್ಯ ಸಿಬ್ಬಂದಿಯವರೂ ಮತ್ತು ಪೋಲೀಸ್ ಸಿಬ್ಬಂದಿಯವರೂ ನಿರಂತರ ವಾಗಿ ಶ್ರಮಿಸುತ್ತ ಇದನ್ನು ತಡೆಗಟ್ಟುತ್ತಿದ್ದಾರೆ. ಅರಣ್ಯ ಸಂಚಾರಿ ದಳಗಳನ್ನು ನೇಮಿಸಿ ಈ ದಳ ಗಳಿಗೆ ವೈರ್‌ಲೆಸ್ ಉಪಕರಣಗಳನ್ನು ಜೋಡಿಸಿರುವ ವಾಹನಗಳನ್ನು ಒದಗಿಸಲಾಗಿದೆ. ಕರ್ನಾಟ ಕೇರಳ ಗಡಿ ಪ್ರದೇಶಗಳಲ್ಲಿ ರಕ್ಷಣಾ ಸಿಬ್ಬಂದಿಯನ್ನು ಹೆಚ್ಚಿಸಿ ಇವರಿಗೆ ವಾಕಿ-ಟಾಕಿ ಉಪಕರಣಗಳನ್ನು ಒದಗಿಸಲಾಗಿದೆ.

ಶ್ರೀಮತಿ ಮೋಟಮ್ಮ.—ಮಾನ್ಯ ಉಪಾಧ್ಯಕ್ಷಣೀಯರೇ, ಮಾನ್ಯ ಮಂತ್ರಿಗಳು ಓದಿದ ಉತ್ತರದ ಪ್ರಕಾರ ಹೀಗೆಲ್ಲಾ ಮಾಡಿರುವುದು ಅಂದರೆ, ಮೂಡಿಗೆರೆ ಮತ್ತು ಬೆಳ್ತಂಗಡಿ ತಾಲ್ಲೂಕಿನಲ್ಲಿ ನಡೆಯುತ್ತಿದ್ದ ಶ್ರೀಗಂಧದ ಕಳ್ಳಸಾಗಾಣಿಕೆ ನಿಂತೇ ಹೋಗಿದೆ ಎನ್ನುವ ರೀತಿಯಲ್ಲಿ ಈ ಉತ್ತರ ಇದೆ.

ನಿಜವಾಗಿ ಹೇಳಬೇಕೆಂದರೆ, ಶ್ರೀಗಂಧದ ಕಳ್ಳಸಾಗಾಣಿಕೆ ಅವ್ಯಾಹತವಾಗಿ ಇನ್ನೂ ನಡೆಯುತ್ತಲೇ ಇದೆ. ಒಂದು ರೀತಿ ಶ್ರೀಗಂಧವು ಹಗಲು ದರೋಡೆಯಾಗುತ್ತಿದೆ. ನನ್ನ ತಾಲ್ಲೂಕಿನಲ್ಲಿಯೇ ದಿನಾಂಕ ೨೮ನೆ ಫೆಬ್ರವರಿ ೧೯೯೦ ರಲ್ಲಿ ಹಾಡುಹಗಲೇ ಶ್ರೀಗಂಧವನ್ನು ಕಳ್ಳಸಾಗಾಣಿಕೆ ಮಾಡುತ್ತಿದ್ದಾಗ, ಫಾರೆಸ್ಟ್ ಇಲಾಖೆಯವರಿಗೆ ಆದು ಗೊತ್ತಾಗಿ ವಾಹನವನ್ನು ಸೀಸ್ ಮಾಡಲಿಕ್ಕೆ ಹೋದಾಗ ಕಳ್ಳಸಾಗಾಣಿಕೆದಾರರ ಶ್ರೀಗಂಧದ ತುಂಡುಗಳಲ್ಲೇ ಹೊಡೆದಿದ್ದಾರೆ. ರಸ್ತೆಯಲ್ಲಿ ಹೋಗುತ್ತಿದ್ದವರಿಗೂ ಈ ತುಂಡುಗಳಿಂದ ಏಟು ಬಿದ್ದಿದೆ. ಇನ್ನೊಮ್ಮೆ, ಇದು ನಿಮಗೆ ಆಶ್ಚರ್ಯವಾಗಬಹುದು ನಮ್ಮ ಎಂ. ಜಿ. ಎಂ. ಆಸ್ಪತ್ರೆಯ ಆಂಬುಲೆನ್ಸ್ ರೋಗಿಗಳನ್ನು ಮಂಗಳೂರಿಗೆ ಬಿಟ್ಟು ವಾಪಸ್ ಬರಬೇಕಾದರೆ ಅದರಲ್ಲಿ ಶ್ರೀಗಂಧದ ತುಂಡುಗಳನ್ನು ಮಾಕಿಕೊಂಡು ಸಪ್ಲೈ ಮಾಡುತ್ತಿದ್ದಾ ಆದನ್ನು ಬೆಂಗಳೂರಿನಲ್ಲಿ ಮಾರಾಟ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ಈ ಪ್ರಕರಣ ಎಲ್ಲರಿಗೂ ಆಶ್ಚರ್ಯ ತಂದಿದೆ. ಅನಂತರ ಆ ಆಂಬುಲೆನ್ಸ್ ವಾಹನದ ಚಾಲಕನನ್ನು ಸಸ್ಪೆಂಡ್ ಮಾಡಿದ್ದಾರೆ. ಇಷ್ಟೆಲ್ಲಾ ಅವ್ಯವಹಾರಗಳು ಅವ್ಯಾಹತವಾಗಿ ನಡೆಯುತ್ತಿದ್ದರೂ ಇವರು ಹಿಡಿದಿರುವುದು ೧೧೫೯೦ ರೂಪಾಯಿ ಮೌಲ್ಯದ ೧೧೮ ಕೆ. ಜಿ. ಶ್ರೀಗಂಧ ಮಾತ್ರ. ಇಷ್ಟನ್ನು ಮಾತ್ರ ಪಶಪಡಿಸಿಕೊಳ್ಳಲಾಗಿದೆಯೆಂದು ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಈ ತರದ ವ್ಯವಹಾರ ದಿನನಿತ್ಯ ನಡೆಯುತ್ತಿರಬೇಕಾದರೆ ಇಷ್ಟು ಕಡಿಮೆ ಮೌಲ್ಯದ ಶ್ರೀಗಂಧವನ್ನು ಕಳ್ಳಸಾಗಣೆದಾರರಿಂದ ಪಶಪಡಿಸಿಕೊಂಡಿದ್ದಾರೆಂದರೆ, ಇವರ ಕಾರ್ಯವ್ಯಾಪ್ತಿ ಎಷ್ಟರಮಟ್ಟಿಗೆ ಸಮರ್ಥನೀಯವಾಗಿದೆಯೆಂದು ನಾವು ಯೋಚನೆ ಮಾಡಬೇಕಾಗಿದೆ. ಕೇರಳ ರಾಜ್ಯದ ಮತ್ತು ಬೆಳ್ತಂಗಡಿ ಪಾಧ್ಯೆ ಮಾತ್ರ ಸ್ಕ್ವಾಡ್‌ನ್ನು ಇಟ್ಟು ವಾಚ್ ಅಂಡ್ ವಾರ್ಡ್ ಮಾಡಿದರೆ ಈ ಕಳ್ಳಸಾಗಾಣಿಕೆಯನ್ನು ತಡೆಯುವುದಕ್ಕೆ ಖಂಡಿತ ಸಾಧ್ಯವಿಲ್ಲ. ಹಗಲುರಾತ್ರಿ ನಡೆಯುತ್ತಿರುವ ಶ್ರೀಗಂಧದ ತುಂಡುಗಳ ಕಳ್ಳಸಾಗಾಣಿಕೆ ತಡೆಯಬೇಕಾದರೆ ಸರಿಯಾದ ವ್ಯವಸ್ಥೆ ಮಾಡಲೇ ಬೇಕಾಗುತ್ತದೆ. ಇವತ್ತು ಫಾರೆಸ್ಟ್ ಆಕ್ಟ್ ಸೆಕ್ಷನ್ ೧೪(ಡಿ) ಯನ್ನು ತಿದ್ದುಪಡಿ ಮಾಡಿ ನಾನ್ ಬೇಲಬಲ್ ಆಕ್ಟ್ ಮಾಡಿ ಅದನ್ನು ಜಾರಿಗೆ ಕೊಡದಿದ್ದರೆ ಖಂಡಿತ ಶ್ರೀಗಂಧದ ಕಳ್ಳಸಾಗಾಣಿಕೆಯನ್ನು ನಿಲ್ಲಿಸಲಿಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಸಿದ್ಧವಿದೆಯೇ? ಮತ್ತು ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ಸದಸ್ಯರು ಹೇಳಿದ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿಲ್ಲ. ಆದರೆ ಒಂದು ಮಾತನ್ನು ನಾನು ಒಪ್ಪಲೇಬೇಕಾಗುತ್ತದೆ. ಕಳ್ಳಸಾಗಾಣಿಕೆ ನಿರಂತರವಾಗಿ ನಡೆಯುತ್ತಿದೆ. ಇದರ ಬಗ್ಗೆ ಪ್ರತಿ ದಿನದ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ, ಮತ್ತೆ ಈ ಕಳ್ಳಸಾಗಾಣಿಕೆಯನ್ನು ಹಿಡಿಯುವುದಕ್ಕಾಗಿ ಒಂದು ಸೆಲ್‌ನ್ನು ಮಾಡಿದ್ದೇವೆ. ಈ ಕಳ್ಳಸಾಗಾಣಿಕೆ ನಡೆಯುತ್ತಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ ಇದನ್ನು ನಿಲ್ಲಿಸಬೇಕು. ಯಾವ ರೀತಿ ನಿಲ್ಲಿಸಬೇಕೆಂಬುದರ ಬಗ್ಗೆ ನಾವು ವಿಚಾರ ಮಾಡಲೇಬೇಕು. ಬೆಳ್ತಂಗಡಿಯಲ್ಲಿ ಏನು ಶ್ರೀಗಂಧದ ಕಳ್ಳಸಾಗಾಣಿಕೆ ನಡೆಯುತ್ತಿದೆಯೊ ಅದನ್ನು ನಿಲ್ಲಿಸಲಿಕ್ಕೆ ನಾವು ತೀವ್ರ ಕ್ರಮವನ್ನು ತೆಗೆದುಕೊಂಡಿದ್ದೇವೆ ಬಹಳ ವರ್ಷಗಳಿಂದ ಸ್ವೇಚ್ಛಾ ಮನೋವೃತ್ತಿ ಅಧಿಕಾರಿಗಳಲ್ಲಿ ಬಂದಿರುವುದು ಈ ಕಳ್ಳಸಾಗಾಣಿಕೆಗೆ ಒಂದು ಕಾರಣವಾಗಿದೆ ಕಾಡುಗಳಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು, ಈ ರೀತಿ ಕಳ್ಳಸಾಗಾಣಿಕೆಗೆ ಅವಕಾಶ ಮಾಡಿಕೊಟ್ಟರೆ ತಾವು ಸಾಹುಕಾರರಾಗಬಹುದೆಂಬ ಉದ್ದೇಶ ಅವರಿಗಿರಬಹುದು. ಅದು ನಡೆದುಕೊಂಡು ಬಂದಿದೆ. ಈ ವ್ಯವಹಾರ ಲಾಭದಾಯಕವಲ್ಲವೆಂದು ಅಧಿಕಾರಿಗಳಿಗೆ ಮನವರಿಕೆಯಾದ ದಿವಸ ಇದನ್ನು ತಪ್ಪಿಸಬಹುದು. ಇದರ ಜೊತೆಗೆ ಕೇರಳಾ ರಾಜ್ಯದ ಗಡಿ ಭಾಗದಲ್ಲಿ ೨–೩ ಶ್ರೀಗಂಧದ ಎಣ್ಣೆ ತಯಾರು ಮಾಡುವ ಫ್ಯಾಕ್ಟರಿಗಳನ್ನು ಪ್ರಾರಂಭ ಮಾಡಿದ್ದಾರೆ. ಕೇರಳಾ ರಾಜ್ಯದಲ್ಲಿ ಶ್ರೀಗಂಧವು ಬೆಳೆಯುವುದೇ ಇಲ್ಲ. ಆದರೂ ಕೇರಳಾ ಸರ್ಕಾರದವರು ಶ್ರೀಗಂಧದ ಎಣ್ಣೆ ಫ್ಯಾಕ್ಟರಿಗೆ ಲೈಸನ್ಸ್ ಕೊಟ್ಟಿದ್ದಾರೆ ಅವರಿಗೆ ನಾವು ಇದರ ಬಗ್ಗೆ ಕಾಗದ ಬರೆದಿದ್ದೇವೆ. ಶ್ರೀಗಂಧದ ಮರಗಳು ನಿಮ್ಮ ರಾಜ್ಯದಲ್ಲಿ ಇಲ್ಲವೇ ಇದ್ದರೂ ಶ್ರೀಗಂಧದ ಎಣ್ಣೆ ತಯಾರು ಮಾಡುವ ಫ್ಯಾಕ್ಟರಿಗೆ ಲೈಸನ್ಸ್ ಕೊಟ್ಟಿರುವುದು ಸರಿಯಲ್ಲ. ಆದುದರಿಂದ ಆ ಲೈಸನ್ಸ್‌ಗಳನ್ನು ವಜಾ ಮಾಡಿ ಎಂದು ಹೇಳಿದ್ದೇವೆ. ಇಷ್ಟರವರೆಗೂ ಅವರು ಲೈಸನ್ಸ್‌ಗಳನ್ನು ವಜಾ ಮಾಡಿಲ್ಲ ನಾವು ಕೇರಳ ರಾಜ್ಯದೊಡನೆ ಸಂಪರ್ಕ ಇಟ್ಟುಕೊಂಡು ಲೈಸನ್ಸ್‌ಗಳನ್ನು ವಜಾ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ಸರ್ಕಾರ ತೀವ್ರವಾದ ನಿಬಂಧನೆಯನ್ನು ತೆಗೆದುಕೊಂಡು ಇದನ್ನು ತಡೆಯಲು ಕ್ರಮ ಕೈಗೊಳ್ಳುತ್ತದೆಂದು ಸರ್ಕಾರದ ಪರವಾಗಿ ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಕೆ. ಗಂಗಾಧರ ಗೌಡ.—ಮಾನ್ಯ ಮಂತ್ರಿಗಳು ಉತ್ತರದಲ್ಲಿ ಏನು ಹೇಳಿದ್ದಾರೆಂದರೆ ಬಸ್‌ಗಳನ್ನು ಮತ್ತು ವಾಹನಗಳನ್ನು ತಪಾಸಣೆ ಮಾಡುತ್ತಿದ್ದೇವೆಂದು. ಆದರೆ ನಮ್ಮ ಚಿಕ್ಕಮಗಳೂರಿನ ಕಡೆಯಿಂದ ತಲೆಹೊರೆಯಲ್ಲಿ ಗಂಧ ಬರುತ್ತಿದೆ. ಎಳನೀರು ಘಾಟಿಯಿಂದ

ಚಾರ್‌ಮುಡಿ ಘಾಟಿಯಿಂದ ದೇವರಮನೆ, ಶಿಶಿಲ ಮುಂತಾದ ಕಡೆಗಳಿಂದ ತಲೆಹೊರೆಯಿಂದ ಶ್ರೀಗಂಧ ಬರುತ್ತಿದ್ದು, ಒಂದು ಕೆ. ಜಿ. ಗೆ ೪೦–೫೦ ರೂಪಾಯಿಗಳಂತೆ ಕೇರಳದ ವ್ಯಾಪಾರಸ್ಥರಿಗೆ ಮಾರಾಟ ಮಾಡುತ್ತಿದ್ದಾರೆ ಚೆಕ್‌ಪೋಸ್ಟ್‌ಗಳನ್ನು ಸರ್ಕಾರದವರು ಇಟ್ಟಿದ್ದಾರೆ. ಆದರೆ ಈ ನಾಲ್ಕೈದು ಚೆಕ್‌ಪೋಸ್ಟ್‌ಗಳನ್ನು ದಾಟಿ ಗಂಧ ವಾಹನ ಮುಖಾಂತರ ಹೋಗುತ್ತಿದೆ. ಇದನ್ನು ಒಂದು ವಾರದ ಹಿಂದೆ ಬೆಳ್ತಂಗಡಿಯ ಪೊಲೀಸರು ಒಂದು ಕಡೆ ೩೦೦ ಕೆ. ಜಿ. ಗಂಧವನ್ನು ಟ್ರಕ್‌ನಲ್ಲಿ ಹೋಗುತ್ತಿದ್ದುದ್ದನ್ನು ಹಿಡಿದಿದ್ದಾರೆ. ಇನ್ನೊಂದು ಕಡೆ ತಲೆಹೊರೆಯಲ್ಲಿ ಸುಮಾರು ೫೦೦ ಕೆ.ಜಿ. ಯಷ್ಟು ತಂದು ಮಾರ್ಗದ ಬದಿನಲ್ಲಿ ತಂದು ಹಾಕಿದ್ದನ್ನು ಪತ್ತೆ ಹಿಡಿದಿದ್ದಾರೆ. ಈಗ ಮಾನ್ಯ ಸಚಿವರು ಏನು ಉತ್ತರ ಕೊಟ್ಟಿದ್ದಾರೆಂದರೆ ೧೧೮ ಕೆ.ಜಿ. ಎಂದು, ಅದು ಸರಿಯಲ್ಲ ಒಂದು ವಾರದ ಹಿಂದೆ ಉದಯವಾಣಿ ಪತ್ರಿಕೆಯಲ್ಲಿ ಲಕ್ಷಾಂತರ ರೂಪಾಯಿಯ ಗಂಧ ಕಳ್ಳಸಾಗಾಣಿಕೆಯಾಗಿರುವ ಬಗ್ಗೆ ಬಂದಿದೆ. ಫಾರೆಸ್ಟ್ ಅಧಿಕಾರಿಗಳಿಗೆ ಇದರ ಬಗ್ಗೆ ವಿಷಯಗಳು ತಿಳಿದಿಲ್ಲ. ಆದ್ದರಿಂದ ಅವರು ಮಂತ್ರಿಗಳಿಗೆ ತಪ್ಪು ಮಾಹಿತಿಯನ್ನು ಒದಗಿಸಿದ್ದಾರೆ. ಇವರು ಹೇಳುತ್ತಾರೆ, ವೈಕಿಟಾಕಿಯನ್ನು ಕೊಟ್ಟಿದ್ದೇವೆ ಮತ್ತು ವೈರ್‌ಲೆಸ್ ಸೆಟ್ಟುಗಳನ್ನು ಫಾರೆಸ್ಟ್ ಅಧಿಕಾರಿಗಳಿಗೆ ಒದಗಿಸಿದ್ದೇವೆಂದು. ಇವರ ಉನ್ನತ ಅಧಿಕಾರಿಗಳು ಬೆಂಗಳೂರಿನಲ್ಲಿರುತ್ತಾರೆ. ಇವರಿಗೆ ಏನೂ ಗೊತ್ತಿಲ್ಲ. ಕಾಡು ಇರುವ ಜಾಗದಲ್ಲಿ ಇವರು ಇರುವುದಿಲ್ಲ, ಡಿ. ಎಫ್. ಓ. ಆಗಲಿ ಕನ್ಸರ್‌ವೇಟರ್ ಆಗಲಿ, ಬೆಂಗಳೂರಿನಲ್ಲಿ ಅಥವಾ ತಾಲ್ಲೂಕ್ ಹೆಡ್‌ಕ್ವಾರ್ಟರ್ಸ್‌ನಲ್ಲಿರುತ್ತಾರೆ. ಕಾಡಿಗೆ ಬಂದು ನೋಡಿದರೆ ಏನು ಪರಿಸ್ಥಿತಿ ಎಂಬುದು ಗೊತ್ತಾಗುತ್ತದೆ. ಪೊನ್ನೆ ಮೊನ್ನೆ ಒಂದು ಆನೆ ಸತ್ತುಹೋಯಿತು. ಅದರ ದಂತ ಕಳುವಾಗಿದೆ. ಅಲ್ಲಿ ರಾತ್ರಿ ಹಗಲು ಕಳ್ಳ ವ್ಯಾಪಾರ ಗಂಧದ್ದು ಹಾಗೂ ಆನೆಯ ದಂತದ್ದು ಪ್ರತಿಯೊಂದು ನಡೆಯುತ್ತ ಇರಬೇಕಾದರೆ, ನೀವು ಈ ರೀತಿಯಾಗಿ ಕೊಡುತ್ತಿರುವ ಉತ್ತರವನ್ನು ಕೊಟ್ಟರೆ ನಾವು ಒಪ್ಪುವುದಕ್ಕೆ ಆಗುವುದಿಲ್ಲ. ಅಲ್ಲಿಗೆ ಒಳ್ಳೆಯ ಅಧಿಕಾರಿಗಳನ್ನು ಕಳುಹಿಸಬೇಕು. ಇದನ್ನು ಹೀಗೆಯೇ ಬಿಟ್ಟರೆ ನಮ್ಮ ಪ್ರದೇಶ ಮರುಭೂಮಿಯಾಗುತ್ತದೆ ಒಂದು ಕಾಲದಲ್ಲಿ ನಮ್ಮ ನಾಡಿಗೆ ಒಳ್ಳೆಯ ಹೆಸರು ಇತ್ತು. ಇದನ್ನು ಸುಂದರ ಕನ್ನಡನಾಡು ಗಂಧದಬೀಡು ಎಂದು ಕರೆಯುತ್ತಿದ್ದರು. ಈಗ ಇದು ಹೋಗಿ ಮರುಭೂಮಿಯಾಗಿದೆ. ಕೂಡಲೇ ತಾವು ಇದರ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಎಲ್ಲಾ ಸೂರಯಾದ ಮೇಲೆ ಕೋಟಿಬಾಗಿಲು ಹಾಕಿದರು ಎನ್ನುವ ರೀತಿಯಲ್ಲಿ ಆಗಬಾರದು. ಆದ್ದರಿಂದ ತಾವು ತಕ್ಷಣವೇ ಕ್ರಮವನ್ನು ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಸದಸ್ಯರು ವ್ಯಕ್ತಪಡಿಸಿರತಕ್ಕ ಆತಂಕ ನನಗೆ ಮನವರಿಕೆಯಾಗಿದೆ ನನಗೂ ಅಷ್ಟೆ ಆತಂಕವಾಗಿದೆ. ಮರಗಳನ್ನು ಕಡಿಯಬಾರದು ಎಂದು ನಾನು ನಿರ್ಧಾರ ತೆಗೆದುಕೊಂಡಿದ್ದೇನೆ. ಕಳ್ಳತನದಿಂದ ಶ್ರೀಗಂಧವನ್ನು ಸಾಗಿಸುವುದನ್ನು ತಪ್ಪಿಸಬೇಕು. ಎಂಬುದರ ಬಗ್ಗೆ ನನಗೆ ಆತಂಕವಿದೆ. ಇಷ್ಟು ಪ್ರಮಾಣದಲ್ಲಿ ಶ್ರೀಗಂಧ ಕಳ್ಳತನವಾಗುತ್ತಿದೆ ಎಂಬುದಕ್ಕೆ ಕಾರಣ. ಬೆಂಗಳೂರಿನಲ್ಲಿ ಕೆಲವರು ಈ ಕಳ್ಳತನವನ್ನು ಮಾಡಿಸುತ್ತಿದ್ದಾರೆ. ಅಂತಹವರು ೫–೬ ಜನ ಇದ್ದಾರೆ. ಮೈಸೂರಿನಲ್ಲಿ ಮೂರು ಜನ ಇದ್ದಾರೆ. ಇವರೇ ಕಳ್ಳತನವನ್ನು ಮಾಡಿಸುವವರು. ಯಾರ್ಯಾರಿಗೊ ಕಮ್ಮಿಷನ್ ಮಾಡ ತ್ತಾರೆ. ಸುಮಾರು ೬೦–೭೦ ಜನ ಬರೇ ಒಂದೇ ಜಾತಿಯವರು, ಒಂದೇ ಕೋಮಿಗೆ ಸೇರಿದ ಕಮ್ಮಿಷನ್ ದಾರರು ಇದ್ದಾರೆ. ಇವರನ್ನು ಹಿಡಿದುಕೊಳ್ಳಲು ಕಾನೂನು ಯಂತ್ರ ಸರಿಯಾಗಿಲ್ಲ. ಕಾನೂನನ್ನು ಸರಿಯಾಗಿ ಭದ್ರ ಮಾಡಿ ಬೆಂಗಳೂರಿನಲ್ಲೇ ವಾಸವಾಗಿ ಕಳ್ಳತನ ಯಾರು ಮಾಡಿಸುತ್ತಿದ್ದಾರೆ, ಅವರನ್ನು ಹಿಡಿಯಲು ಕ್ರಮ ಕೈಗೊಳ್ಳಬೇಕಾಗುತ್ತದೆ. ತಲೆಹೊರೆಯ ಮೇಲೆ ಸಾಗಿಸಿರುವುದು ನಿಜ, ಇಷ್ಟು ಪ್ರಮಾಣದಲ್ಲಿ ಗಂಧವನ್ನು ಕಡಿಯುತ್ತಿರುವುದು ನಿಜ, ಇದಕ್ಕೆ ಯಾರ್ಯಾರು ಶಾಮೀಲಾಗಿದ್ದಾರೆ ಏನ್ನುವುದನ್ನು ನಾನು ಕಂಡುಹಿಡಿಯಬೇಕು. ಈ ಅಧಿವೇಶನ ಮುಗಿದ ತಕ್ಷಣವೇ ಇದೇ ಕೆಲಸ ಮಾಡುತ್ತೇನೆ. ದಯಮಾಡಿ ಚಿಂತೆ ಮಾಡಬೇಡಿ. ನಿಮ್ಮ ಆತಂಕಕ್ಕೆ ಪರಿಹಾರ ನೀಡುತ್ತೇನೆ. ಮತ್ತೆ ಬೆಂಗಳೂರಿನಲ್ಲಿರತಕ್ಕ ಕಳ್ಳಸಾಗಾಣಿಕೆದಾರರು ಏನು ಕಮ್ಮಿಕ್ಕ ಕೊಡುತ್ತಿದ್ದಾರೆ. ಅಂತಹವರನ್ನು ಆದಷ್ಟು ಶೀಘ್ರವಾಗಿ ಬಂಧಿಸಿ ಶಿಕ್ಷೆ ಮಾಡುತ್ತೇವೆಂದು ಸರ್ಕಾರದ ಪರವಾಗಿ ಭರವಸೆ ಕೊಡುತ್ತೇನೆ.

ಶ್ರೀ ಕೆ ಗಂಗಾಧರಗೌಡ.—ತಲೆ ಹೊರೆಯ ಮೂಲಕ ಯಾವ ಯಾವ ರೀತಿಯಲ್ಲಿ ಗಂಧದ ಮರವನ್ನು ಸಾಗಿಸುತ್ತಾ ಇದ್ದಾರೆ ಅಂದರೆ, ನಮ್ಮ ದಕ್ಷಿಣ ಕನ್ನಡದ ಅಕ್ಕಿಮುಡಿಯ ಒಳಗೆ, ಸೇರಿಸಿಕೊಂಡು ಹೊಗುವುದು, ಸ್ಕೂಟರ್‌ಗಳಲ್ಲಿ ಹಾಕಿಕೊಂಡು ಹೋಗುವುದು. ಮಾಂಸ ಇತ್ಯಾದಿ ಪದಾರ್ಥಗಳ ಒಳಗೆ ಸೇರಿಕೊಂಡು ಸಾಗಿಸುವುದು ಮುಂತಾಗಿ ನಡೆದಿದೆ. ಇದನ್ನು ನಿರ್ಬಂಧಿಸಲು ಪಶ್ಚಿಮ ಘಟ್ಟದ ಭಾಗಗಳು ಎಲ್ಲೆಲ್ಲಿದೆ, ಅಲ್ಲಿ ಬಲವಾದ ಅಧಿಕಾರಿಗಳ ಒಂದು ಪಡೆಯನ್ನು ಇಟ್ಟು ಕಾಯಬೇಕು. ಹೀಗೆ ಮಾಡದೇ ಹೋದರೆ ಕಷ್ಟವಾಗಬಹುದು. ಮಾನ್ಯ ಸಚಿವರು ಯಾವುದೋ ಒಂದು ಕೋಮಿಗೆ ಸೇರಿ

ದವರು ಈ ಕಳ್ಳ ವ್ಯವಹಾರದಲ್ಲಿ ತೊಡಗಿದ್ದಾರೆ ಅಂದರೆ ಆ ಕೋಷ್ಠು ಯಾವುದು ? ಅಧಿಕಾರಿಗಳ ಕೋಷ್ಠೆ ? ಅಥವಾ ಸಾರ್ವಜನಿಕರು ಇದರಲ್ಲಿ ಭಾಗಿಗಳಾಗಿದ್ದಾರೆಯೇ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಈ ವ್ಯವಹಾರದಲ್ಲಿ ತೊಡಗಿರುವ ಮತ್ತು ಕಳ್ಳಸಾಗಾಣಿಕೆಯನ್ನು ಪ್ರೋತ್ಸಾಹಿಸುತ್ತಿರುವ ಕೆಲವು ಜನರು ಇದ್ದಾರೆ. ಅದನ್ನೆಲ್ಲಾ ನಾನು ಡಿಮ್ಯಾಂಡ್‌ಗಳಿಗೆ ಉತ್ತರ ಕೊಡುವ ಸಂದರ್ಭದಲ್ಲಿ ಎಲ್ಲವನ್ನೂ ಹೇಳುತ್ತೇನೆ. ಈಗ ಬೇಡ.....

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಸದಸ್ಯರು ಬಹಳ ಉತ್ತಮವಾದಂಥ ವಿಚಾರದ ಮೇಲೆ ಬೆಳಕು ಚೆಲ್ಲಿದ್ದಾರೆ. ಇದೊಂದು ಗುರುತರವಾದುಂಥ ಪ್ರಶ್ನೆಯಾಗಿದೆ. ದಯವಿಟ್ಟು ಮಾನ್ಯ ಸಚಿವರು ಈ ಕಳ್ಳಸಾಗಾಣಿಕೆಯನ್ನು ಮಾಡುವ ವ್ಯವಹಾರದಲ್ಲಿ ಯಾರ್ಯಾರು ಇದ್ದಾರೆ ಅವರನ್ನು ಅವರ ಹೆಸರನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಸಚಿವರು ಮೂಡಿಗೆರೆ ತಾಲ್ಲೂಕಿಗೆ ದೊಡ್ಡ ಅಪಮಾನವನ್ನು ಮಾಡಿದ್ದಾರೆ. ೧೧೮ ಕೆ. ಜಿ. ಶ್ರೀಗಂಧದ ಮರವನ್ನು ಹಿಡಿದಿದ್ದಾರೆ ಎಂದು ಹೇಳಿದ್ದಾರೆ. ಅದು ಬಹುಶಃ ೧೧೮ ಟನ್ ಇರಬಹುದು. ಏಕೆಂದರೆ ಗಂಧದ ಕಾಡಿನ ಪ್ರದೇಶದಲ್ಲಿ ೧೧೮ ಕೆ. ಜಿ. ಅಂದರೆ ಆ ಭಾಗಕ್ಕೆ ಒಂದು ರೀತಿಯಲ್ಲಿ ಅಪಮಾನವಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದು ನಿಜವಾಗಿದೆ. ಗಂಧದ ಕಳ್ಳಸಾಗಾಣಿಕೆ ಬೇಕಾದಷ್ಟು ಆಗುತ್ತಿದೆ. ಜಾಸ್ತಿಯಾಗುತ್ತಿದೆ. ಆದರೆ ನಮ್ಮ ಅಧಿಕಾರಿಗಳು ನಾಮಕಾವಾಸ್ತೆಗೆ ಕೊಟ್ಟಿದ್ದಾರೆ. ನಮ್ಮ ಅಧಿಕಾರಿಗಳನ್ನು ಕೊಟ್ಟಿದ್ದನ್ನು ನಾನು ಒಪ್ಪುತ್ತಾ ಇಲ್ಲ. ಒಟ್ಟಿನಲ್ಲಿ ಈ ಅವ್ಯವಹಾರಕ್ಕೆ ಪ್ರತಿಬಂಧಕ ಹಾಕಬೇಕು. ಅದನ್ನು ತಮ್ಮೆಲ್ಲರ ಸಹಕಾರದಿಂದ ಮಾಡಬೇಕಾಗಿದೆ ಅದನ್ನು ಮಾಡೋಣ. ನಾನಂತೂ ಇದನ್ನು ಮುಂದುವರಿಯುವುದಕ್ಕೆ ಬಿಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ದಯವಿಟ್ಟು ಆ ಕೆಲಸವನ್ನು ತಾವುಗಳು ಮಾಡಬೇಕು, ತಮಗೆ ಆ ದಿಸೆಯಲ್ಲಿ ಈ ಸಭೆಯು ಇತಿಯಿಂದ ಎಷ್ಟು ಅಧಿಕಾರ ಬೇಕೋ ಅದನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ.

ಶ್ರೀಮತಿ ಮೋಟಮ್ಮ.—ನಮ್ಮ ಭಾಗದ ಡಿವೈಎಸ್‌ಪಿ ರವರನ್ನು ವೀರಪ್ಪನ್‌ನನ್ನು ಹಿಡಿಯುವುದಕ್ಕೆ ಕಳುಹಿಸಿದ್ದಾರೆ. ಆದರೆ ಅವರಿಲ್ಲದೇ ಅಲ್ಲಿ ಬೇಕಾದಷ್ಟು ಜನ ವೀರಪ್ಪನ್‌ಗಳು ಹುಟ್ಟಿಕೊಂಡಿದ್ದು ಇಲ್ಲಿ ಕಳ್ಳಸಾಗಾಣಿಕೆ ಮುಂತಾದ ವ್ಯವಹಾರಗಳಲ್ಲಿ ತೊಡಗಿದ್ದಾರೆ. ಇದು ದಿನೇ ದಿನೇ ಜಾಸ್ತಿಯಾಗುತ್ತಾ ಇದೆ. ಇವರನ್ನು ಮಾರು ಹೇಗೆಯುತ್ತಾರೆ ?

ಉಪಾಧ್ಯಕ್ಷರು.—ಈಗಾಗಲೇ ಅವರು ಇದಕ್ಕೆ ಉತ್ತರ ಹೇಳಿದ್ದಾರೆ.

ಬೀಡಿ ಕಟ್ಟುವ ಜನರಿಗೆ ಬೇಕಾದಷ್ಟು ಕೆಲಸವಿಲ್ಲದೆ ಉಂಟಾದ ಗಂಭೀರ ಪರಿಸ್ಥಿತಿ ಬಗ್ಗೆ

ಶ್ರೀ ರಮಾನಾಥ ರೈ.—ಮಾನ್ಯ ಉಪಾಧ್ಯಕ್ಷರೆ, ಬೀಡಿ ಕಟ್ಟುವ ಜನರಿಗೆ ಬೇಕಾದಷ್ಟು ಕೆಲಸ ಇಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಂಭೀರ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೀಡಿ ಉದ್ಯಮವು ಒಂದು ವ್ಯಾಪಾರಿ ಉದ್ಯಮವಾಗಿದ್ದು, ಬಹಳಷ್ಟು ಜನ ಈ ಉದ್ದಿಮೆಯನ್ನು ಕಾಯ್ದೆ ಜಿ.ಎಸ್.ಓ.ಪಾಯಕ್ಕೆ ಅಳವಡಿಸಿರುತ್ತಾರೆ. ಇವರಿಗೆ ಕೆಲಸವಿಲ್ಲದೆ ಗಂಭೀರ ಪರಿಸ್ಥಿತಿ ಉಂಟಾಗಲು ಬಹಳಷ್ಟು ಕಾರಣಗಳಿವೆ. ಮೊದಲನೆಯದಾಗಿ ರಚ್ಚಾ ಪದಾರ್ಥಗಳ ಕೊರತೆ ಇರುವುದರಿಂದ, ಮತ್ತು ಸಂಘ ಪ್ರದೇಶದಿಂದ ಆಮದು ಮಾಡಿಕೊಳ್ಳುತ್ತಿದ್ದ ಬೀಡಿ ಎಲೆಗಳನ್ನು ರಾಷ್ಟ್ರೀಕರಣ ಮಾಡಿ ಅಲ್ಲಿನ ಬೀಡಿ ಎಲೆಯ ಮೇಲೆ ಮಾರಾಟದ ರಫ್ತು ದರ